

ಸಿಲೇರಿಗಾಂವ್ ಮನೆಗಳ ಒಂದು ಸುಂದರ ನೋಟ



ಪಶ್ಚಿಮ ಘಟ್ಟದಲ್ಲಿರುವಷ್ಟು ಅಲ್ಲ. ನಶ್ಯವನ್ನು ನೀರಿನಲ್ಲಿ ಅದ್ದಿ ಕಾಲಿಗೆ ಹಚ್ಚಿದ್ದರಿಂದ ಅಷ್ಟೊಂದು ಇಂಬಳಗಳು ಕಾಲಿಗೆ ಹತ್ತಲಿಲ್ಲ. ಡಾಮಸಂಗ್ ಕೋಟೆ ಹಳೆಯ ಪಳೆಯುಳಿಕೆಯಾಗಿದ್ದು, ಅಲ್ಲಿ ಕೋಟೆಯ ಕುರುಹುಗಳು ಅಷ್ಟೊಂದು ಕಾಣಲಿಲ್ಲ.

ಇದು ಡಾರ್ಜಿಲಿಂಗ್ ಜಿಲ್ಲೆಯ ಏಕೈಕ ಕೋಟೆ. ಈ ಭಾಗದ ಕೊನೆಯ ಲಾಪ್ಚ ದೊರೆ ಗ್ಯಾಬೋ ಅಚ್ಯುತ್‌ನದ್ದು. ಅವನ ನಂತರ ಈ ಕೋಟೆಯು ಭೂತಾನಿಗರ ಕೈವಶವಾಯಿತು. 1864ರ ಆಂಗ್ಲ–ಭೂತಾನಿ ಯುದ್ಧದಲ್ಲಿ ಇದು ಬ್ರಿಟಿಷರ ಕೈಸೇರಿತು.

ರಾಮಿಟೆ ಎನ್ನುವ ಇನ್ನೊಂದು ಎತ್ತರವಾದ ಪರ್ವತವಿದೆ. ಇಲ್ಲಿಂದ ತೀಸ್ತಾ ನದಿಯ ವಿಹಂಗಮ ನೋಟ ಸವಿಯಬಹುದು. ಹಿಮಾಲಯದ ಕಾಂಚನ ಗಂಗಾ ಪರ್ವತ ಶ್ರೇಣಿಯನ್ನೂ ಕಾಣಬಹುದು. ಇದು ಜಗತ್ತಿನ ಮೂರನೇ ಅತಿ ಎತ್ತರದ ಶಿಖರ ಶ್ರೇಣಿ. ವರ್ಷವಿಡೀ ಹಿಮದಿಂದ ಆವೃತವಾಗಿರುತ್ತದೆ.

## ಸಿಲ್ಕ್‌ರೋಡ್‌ನತ್ತ..

ಮೂರನೇ ದಿವಸ ಸಿಲೇರಿಗಾಂವ್‌ನಿಂದ ನಮ್ಮ ಟ್ರೆಕ್ಕಿಂಗ್‌ನ ಕೇಂದ್ರ ಬಿಂದುವಾದ ಸಿಲ್ಕ್‌ರೋಡ್ ನೋಡಲು ಜೀಪಲ್ಲಿ ಹೊರಟೆವು. ಕಡಿದಾದ ಪರ್ವತ ಶ್ರೇಣಿಗಳಲ್ಲಿ ಪ್ರಯಾಣ. ಕೆಲವೆಡೆ ಭೂಕುಸಿತದಿಂದ ನಿಲ್ಲಬೇಕಾಯಿತು.

ಸಿಕ್ಕಿಂ ರಾಜ್ಯದ ಗಡಿಯನ್ನು ಪ್ರವೇಶಿಸುವಾಗ ಅಂತರರಾಷ್ಟ್ರೀಯ ಗಡಿ ಪ್ರವೇಶದ ಸಂದರ್ಭ ನಡೆಸುವಂತೆ ಇಲ್ಲಿಯೂ ತಪಾಸಣೆ ನಡೆಸುತ್ತಾರೆ. ವೀಸಾ ಅಗತ್ಯವಿಲ್ಲವಾದರೂ ಯಾವ ಪೌರತ್ವ? ಎಷ್ಟು ದಿನ ವಾಸ್ತವ್ಯ? ಇತ್ಯಾದಿ ಪ್ರಶ್ನೆಗಳಿರುತ್ತವೆ. ಇವು ಸೂಕ್ಷ್ಮ ಪ್ರದೇಶವಾದ್ದರಿಂದ ಮತ್ತು ಅಂತರರಾಷ್ಟ್ರೀಯ ಗಡಿಗಳನ್ನು ಹೊಂದಿರುವುದರಿಂದ ಹೋಗಿ ಬರುವವರ ಮೇಲೊಂದು ಕಣ್ಣು ಇದ್ದೇ ಇರುತ್ತದೆ.

ರೊಂಗ್ಲಿ ಎಂಬ ಸಣ್ಣ ಪಟ್ಟಣ ಪ್ರವೇಶಿಸಿದಾಗ ಮಧ್ಯಾಹ್ನ 2 ಗಂಟೆ. ಇಲ್ಲಿಂದ ಸಿಲ್ಕ್‌ರೋಡ್ ಆರಂಭ. 2 ಗಂಟೆ ಪ್ರಯಾಣದ ನಂತರ ಜುಲುಪ್ ಸಿಗುತ್ತದೆ. ಇದುವೇ ಸಿಲ್ಕ್‌ರೋಡ್‌ನ ಪ್ರಮುಖ ಊರು. 19ನೇ ಶತಮಾನದಲ್ಲಿ ಭಾರತೀಯರು ರಸ್ತೆಯ ಮುಖಾಂತರ ಚೀನಾಕ್ಕೆ ಹೋಗುತ್ತಿದ್ದರು. ಅಲ್ಲಿಂದ ಮುಂದೆ ರಷ್ಯಾ ದಾಟಿ, ಸೌದಿ ಅರೇಬಿಯ, ಯೂರೋಪ್ ಮತ್ತು ಆಫ್ರಿಕಾ ಖಂಡಗಳಿಗೆ ವ್ಯಾಪಾರಕ್ಕಾಗಿ ಸಾಗುತ್ತಿದ್ದರು. ಸಮುದ್ರ ಮಟ್ಟದಿಂದ 11,200 ಅಡಿ ಎತ್ತರ. ಈ ಪ್ರದೇಶವು ಪೂರ್ತಿ ಮಂಜಿನಿಂದ ಕೂಡಿದ್ದು ಮಂಜು ಸರಿದಾಗ ಕೊಂಚ ಇಲ್ಲಿಯ ಪ್ರಕೃತಿಯ ದರ್ಶನವಾಗುತ್ತದೆ.

ಸಿಕ್ಕಿಂ ರಾಜ್ಯದ ಒಂದು ವಿಶೇಷವೆಂದರೆ ಇಲ್ಲಿ ಎಲ್ಲಾ ಅಂಗಡಿಗಳಲ್ಲಿ ಮದ್ಯ ದೊರೆಯುತ್ತದೆ. ಗ್ನತಾಂಗ್ ಎಂಬ ಪುಟ್ಟ ಹಳ್ಳಿಯ ಕಿರಾಣಿ ಅಂಗಡಿಗಳಲ್ಲಿಯೂ ಮದ್ಯ ದೊರೆಯುತ್ತದೆ. ಗ್ನೆತಾಂಗ್ ಹಳ್ಳಿ ವರ್ಷದ 3 ತಿಂಗಳು ಹಿಮದಿಂದ ಅವೃತ್ತವಾಗಿರುತ್ತದೆ. ನಾವು ಹೋದಾಗಲೂ ಸಹಿಸಲಸಾಧ್ಯವಾದ ಚಳಿ. ಬೆಚ್ಚನೆಯ ಉಡುಪುಗಳು, ಹೊದಿಕೆಗಳು, ಕೈ ಕವಚಗಳು, ಜಾಕೆಟ್‌ಗಳು–ಏನಿದ್ದರೂ ಸಾಕಾಗುವುದಿಲ್ಲ. ಚಳಿಯಲ್ಲಿ ಥರಗುಟ್ಟಿ ಹೋದೆವು.

ಮಾರನೇ ದಿನ ಪುನಃ ಸಿಲ್ಕ್‌ರೋಡ್ ನೋಡಲು ಹೊರಟೆವು. ಬೆಳಗ್ಗಿನ ವಾತಾವಾರಣ ಶುಭ್ರವಾಗಿದ್ದ ಕಾರಣ ಸಿಲ್ಕ್‌ರೋಡ್‌ನ ಪೂರ್ಣ ಖುಷಿ ಸಿಕ್ಕಿತು. ಬೆಟ್ಟದ ತುದಿಯಿಂದ 35 ತಿರುವುಗಳು ಮತ್ತು ಕೊನೆಯಲ್ಲಿ ಜುಲುಕ್ ಹಳ್ಳಿ ನಯನ ಮನೋಹರವಾಗಿ ಕಂಡಿತು. ಪರ್ವತದ ಬಲಬದಿಗೆ ಕಾಂಚನಗಂಗಾ ಪರ್ವತಶ್ರೇಣಿಯ ಬೆಳ್ಳಿಯ ಶಿಖರಗಳು ಪ್ರಕಾಶಮಾನವಾಗಿದ್ದವು. ಈ ಪ್ರದೇಶದ ತುದಿಯಲ್ಲಿ ನಿಂತು ನೋಡಿದಾಗ ರಸ್ತೆ ಹಾವು ಹರಿದಂತೆ ಕಾಣುತ್ತದೆ.

ಗ್ನತಾಂಗ್‌ನಲ್ಲಿ ಹೋಮ್‌ಸ್ಟೇಗಳನ್ನು ಹೆಣ್ಣುಮಕ್ಕಳೇ ನಡೆಸುತ್ತಾರೆ. ಗಂಡಸರು ರಸ್ತೆ ಕಾಮಗಾರಿಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಈ ಪ್ರದೇಶ ಮಿಲಿಟರಿಯ ಅಧೀನದಲ್ಲಿದೆ. ಇಲ್ಲೆಲ್ಲ ಭಾರತೀಯ ಸೇನೆಯ ಕವಾಯತುಗಳು ನಡೆಯುತ್ತಿರುತ್ತವೆ. ಇಲ್ಲಿ ಚಹಾಗೆ ಯಾಕ್ ಮೃಗದ ಹಾಲನ್ನು ಬಳಸುತ್ತಾರೆ. ಅತ್ಯಂತ ಎತ್ತರದಲ್ಲಿರುವ ಈ ಪ್ರದೇಶದಲ್ಲಿ ಕೆಲವೊಮ್ಮೆ ಆಮ್ಲಜನಕದ ಕೊರತೆಯೂ ಕಂಡುಬರುತ್ತದೆ.